ಬೆಂಗಳೂರು ಸರ್ಕಾರಿ ಔಷಧಿ ಮಳಿಗೆಯಿಂದ ಔಷಧಿಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸರ್ಕಾರಿ ಔಷಧಿ ಮಳಿಗೆಯಿಂದ ರಾಜ್ಯದ ಸಾರ್ವಜನಿಕ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಇತರೆ ಆಸ್ಪತ್ರೆಗಳಿಗೆ ಔಷಧಿಗಳನ್ನು ಕಂತುಗಳಲ್ಲಿ ಕಳುಹಿಸಬೇಕಾಗಿದ್ದು, ಫೆಬ್ರವರಿ ಅಂತ್ಯದಲ್ಲಿದ್ದರೂ ಸಹ ಇಲ್ಲಿಯ ತನಕ ವಿತರಣೆ ಮಾಡದಿರುವುದು ಶೋಚನೀಯ. ಕೆಲವು ಆಸ್ಪತ್ರೆಗಳಿಗೆ ಸ್ವಲ್ಪ ಔಷಧಿಗಳನ್ನು ವಿತರಣೆ ಮಾಡಿದ್ದು ಕೆಲವು ಆಸ್ಪತ್ರೆಗೆ ಒಂದು ಕಂತನ್ನೂ ವಿತರಣೆ ಮಾಡದಿರುವುದು ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಬೇಕಾಗಿದೆ. ಔಷಧಿಗಳಿದ್ದು, ನಿವೈದ್ಯಾಧಿಕಾರಿಯವರನ್ನು ಕೊಡದಿರುವುದು, ವೈದ್ಯಾಧಿಕಾರಿಯವರಿದ್ದೂ, ಔಷಧಿಗಳನ್ನು ಕೊಡದೇ ಇರುವುದು ನಮ್ಮ ಆಡಳಿತದ ವ್ಯವಸ್ಥೆ. ಆದರೆ ಇಂದು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಆಸ್ಪತ್ರೆಗಳಿಗೆ ಸರ್ಕಾರಿ ಔಷಧಿ ಮಳಿಗೆಯಿಂದ ಸ್ವಲ್ಪವೂ ಔಷಧಿಗಳನ್ನು ನೀಡಿಲ್ಲವೆಂಬ ದೂರುಗಳು ಬಂದಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಸಾರ್ವಜನಿಕ ಆಸ್ಪತ್ರೆಗೆ 4.20 ಲಕ್ಷದ ಔಷಧಿಯನ್ನು ಸರ್ಕಾರಿ ಔಷಧಿ ಮಳಿಗೆಯಿಂದಲೂ, 2.80 ಲಕ್ಷದ ಔಷಧಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದಲೂ ಕಳುಹಿಸಬೇಕಾಗಿದೆ. ಆದರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2.80 ಲಕ್ಷ ರೂಪಾಯಿ ಮೌಲ್ಯದ ಔಷಧಿಯಲ್ಲಿ ಕೇವಲ 53 ಸಾವಿರ ರೂಪಾಯಿ ಮೌಲ್ಯದ ಔಷಧಿಯನ್ನು ಮಾತ್ರ ವಿತರಣೆ ಮಾಡಿದ್ದು, ಬೆಂಗಳೂರು ಸರ್ಕಾರಿ ಔಷಧಿ ಮಳಿಗೆಯಿಂದ ಇನ್ನೂ ಸ್ವಲ್ಪವೂ ಔಷಧಿಯನ್ನು ವಿತರಣೆ ಮಾಡಿಲ್ಲ. ಹಲವಾರು ಮನವಿ ಮತ್ತು ತಂತಿ ಸಂದೇಶಗಳನ್ನು ಕಳಿಹಿಸಿದರೂ ಇಲ್ಲಿಯ ತನಿಕ ಔಷಧಿ ಬಿಡುಗಡೆಯಾಗಿಲ್ಲ. ಸರ್ಕಾರಿ ಔಷಧಿ ಮಳಿಗೆಯಿಂದ ದಿನಾಂಕ: 6.2.1997ಕ್ಕೆ ತಲುಪಿದ ಪತ್ರದಂತೆ ಜವಾಬ್ದಾರಿಯುತ ವ್ಯಕ್ತಿಯನ್ನು ಕಳುಹಿಸಿ ಔಷಧಿಯನ್ನು ಪಡೆಯಲು ತಿಳಿಸಿರುತ್ತಾರೆ. ಆದರೆ ಬೆಂಗಳೂರು ಸರ್ಕಾರಿ ಔಷಧಿ ಮಳಿಗೆಯಿಂದ ಔಷಧಿಯನ್ನು ಕೊಡುವಾಗ ಮಾಮೂಲಿಯನ್ನು ಪಡೆಯುತ್ತಿರುವುದರಿಂದ ಯಾವ ಜವಾಬ್ದಾರಿಯುತ ವ್ಯಕ್ತಿಗಳು ಔಷಧಿಯನ್ನು ಪಡೆಯಲು ಬೆಂಗಳೂರಿಗೆ ಹೋಗುತ್ತಿಲ್ಲ. ಆದ್ದರಿಂದ ಹಿಂದಿನಂತೆ ಗೂಡ್ಸ್ ವಾಹನಗಳ ಮುಖಾಂತರ ಔಷಧಿಗಳನ್ನು ತಕ್ಷಣ ಕಳುಹಿಸಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇಲ್ಲಿಯತನಕ ಭ್ರಷ್ಟಾಚಾರಕ್ಕಾಗಿ ಔಷಧಿಗಳನ್ನು ಬಿಡುಗಡೆ ಮಾಡದೇ ಕರ್ತವ್ಯಚ್ಯುತಿ ಎಸಗಿದ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಡಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಡಾ॥ ಹೆಚ್.ಪಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು): ಉಳ್ಳಾಲ ಪಟ್ಟಣ ಪಂಚಾಯತ್ ಈ ಹಿಂದೆ ಅಧಿಸೂಚಿತ ಪ್ರದೇಶವಾಗಿದ್ದು ಕಳೆದ ವರ್ಷ ಪಟ್ಟಣ ಪಂಚಾಯತ್‌ಯಾಗಿ ಪರಿವರ್ತನಗೊಂಡಿದ್ದು ಈ ಪಂಚಾಯಿತಿ ವತಿಯಿಂದ ಖಾತೆ ಬದಲಾವಣೆ ಬಗ್ಗೆ ನಗರಾಭಿವೃದ್ಧಿ ಇಲಾಖೆ, ಬೆಂಗಳೂರುನಲ್ಲಿರುವ ಮಹಾಲೇಖಪಾಲರಿಗೆ ಅಧಿಕೃತ ದಾಖಲಾತಿ ವಿವರಗಳನ್ನು ನೀಡದಿರುವುದರಿಂದ ಉಳ್ಳಾಲ ನಗರ ಪಂಚಾಯತ್ ಖಜಾನೆಯಲ್ಲಿ ತನ್ನ ಖಾತೆಯ

ಬದಲಾವಣೆಯನ್ನು ಮಾಡಲು ಅಧಿಕಾರಿಗಳು, ವಿಫಲವಾಗಿದ್ದು ತತ್ಪರಿಣಾಮವಾಗಿ ಸದರಿ ಪಟ್ಟಣ ಪಂಚಾಯಿತಿ ದೈನಂದಿನ ಆಡಳಿತ ಕೆಲಸಗಳಿಗೆ ಹಾಗೂ ಅಭಿವೃದ್ಧಿ ಕಾಮಗಾರಿಗಳು ತೆಗೆದುಕೊಳ್ಳದೇ ತೊಂದರೆಯಾಗಿದ್ದು ಈ ಪಟ್ಟಣ ಪಂಚಾಯಿತ್‌ನ ಖಾತೆ ಬದಲಾವಣೆ ಮಾಡಲು ಮಹಾಲೇಖಪಾಲರಿಗೆ ಸೂಕ್ತ ನಿರ್ದೇಶನವನ್ನು ನೀಡಲು ಸರಿಯಾದ ವ್ಯವಸ್ಥೆ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರು ಕೋರಿರುವುದು ಸರಿಯಷ್ಟೆ.

ಕರ್ನಾಟಕ ರಾಜ್ಯದಲ್ಲಿನ ಮಂಡಲ ಪಂಚಾಯಿತಿಗಳು ಟೌನ್ ಪಂಚಾಯಿತಿಗಳಾಗಿ ಪರಿವರ್ತನೆಗೊಂಡು ಅಸ್ತಿತ್ವಕ್ಕೆ ಬಂದಿದ್ದು ಈ ತರಹ ಒಟ್ಟು 87 ಮಂಡಲ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸಲಾಗಿದೆ. ಕರ್ನಾಟಕ ವಿತ್ತ ಸಂಹಿತೆ ಅನುಚ್ಛೇದ 288 ನೇ ಪ್ರಕಾರ ಖಜಾನೆಯೊಡನೆ ಹಣಕಾಸಿನ ವ್ಯವಹಾರ ನಿರ್ವಹಿಸಲು ಮಹಾಲೇಖಪಾಲಕರ ಪ್ರಾಧಿಕಾರ ಅವಶ್ಯವಿರುವುದಾಗಿ ಖಜಾನೆಯ ಅಧಿಕಾರಿಗಳು ತಿಳಿಸಿದ ಮೇರೆಗೆ ಇಂತಹ ಪಟ್ಟಣ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಡ್ರಾ ಮಾಡಲು ಹಾಗೂ ಟ್ರಜರಿಯೊಡನೆ ಹಣಕಾಸಿನ ವ್ಯವಹಾರ ಮಾಡಲು ಅನುವಾಗುವಂತೆ ಸೂಕ್ತ ಪ್ರಾಧಿಕಾರಣ ಪತ್ರವನ್ನು ಖಜಾನಾಧಿಕಾರಿಗಳಿಗೆ ನಿರ್ದೇಶನ ನೀಡಲು ಪೌರಾಡಳಿತ ನಿರ್ದೇಶನಾಲಯವು ಸರ್ಕಾರಕ್ಕೆ ದಿನಾಂಕ: 23-7-96 ರಂದು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ದಿನಾಂಕ: 25-7-96 ರಂದು ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು ಇವರಿಗೆ ಸರ್ಕಾರೀ ಆದೇಶ ಸಂಖ್ಯೆ: ವನಇ 641 ಎಂಎಲ್‌ಆರ್ 95 (39) ದಿನಾಂಕ: 9-1-95 ರಲ್ಲಿ ಆದೇಶಿಸಿದ 48 ಮಂಡಲ ಪಂಚಾಯಿತಿಗಳನ್ನು ಟೌನ್ ಪಂಚಾಯಿತಿಗಳನ್ನಾಗಿ ಪರಿವರ್ತನೆಗೊಂಡಂತಹ ಮಂಡಲ ಪಂಚಾಯಿತಿಗಳ ಖಾತೆಯನ್ನು ಮುಚ್ಚಿ ಅವುಗಳ ಲೆಕ್ಕಪತ್ರಗಳನ್ನು ಟೌನ್ ಪಂಚಾಯಿತಿಗೆ ಪರಿವರ್ತನೆ ಮಾಡಬೇಕೆಂದು ಹಾಗೂ ಟೌನ್ ಪಂಚಾಯಿತಿಗಳು ಹೊಸದಾಗಿ ಅಸ್ತಿತ್ವಕ್ಕೆ ಬಂದ ಪಕ್ಷಕ್ಕ ಖಜಾನೆಯೊಂದಿಗೆ ವ್ಯವಹಾರ ನಿರ್ವಹಿಸಲು ಎಲ್ಲಾ ಖಜಾನಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮತ್ತು ಪ್ರಾಧಿಕಾರದ ಪತ್ರವನ್ನು ನೀಡುವಂತೆ ಮಹಾಲೇಖಪಾಲರನ್ನು ಕೋರಲಾಗಿದೆ. ಉಳ್ಳಾಲವು ಹಿಂದೆ ಅಧಿಸೂಚಿತ ಪ್ರದೇಶ ಸಮಿತಿಯಾಗಿತ್ತು. ಅದನ್ನು ಈಗ ಪಟ್ಟಣ ಪಂಚಾಯತ್ ಆಗಿ ಪರಿವರ್ತನೆ ಮಾಡಲಾಗಿರುತ್ತದೆ. ಉಳ್ಳಾಲ ಪಟ್ಟಣ ಪಂಚಾಯತನಿಂದಲೂ ಸಹಾ ಹೊಸದಾಗಿ ಖಾತೆಯನ್ನು ಪಡೆಯಲು ನಿರ್ದೇಶನ ನೀಡುವಂತೆ ಸರ್ಕಾರಕ್ಕೆ ಮನವಿ ಬಂದಿರುತ್ತದೆ. ಇದೇ ರೀತಿಯಾಗಿ ಬೇರೆ ಜಿಲ್ಲಾಧಿಕಾರಿಗಳಿಂದಲೂ ಪ್ರಸ್ತಾವನೆ ಬಂದಿರುತ್ತದೆ. ಈ ಎಲ್ಲಾ ಪ್ರಸ್ತಾವನೆಗಳನ್ನು ಪರಿಶೀಲನೆ ಮಾಡಿ ಹಿಂದೆ ಅಧಿಸೂಚಿತ ಪ್ರದೇಶ ಸಮಿತಿಗಳಾಗಿದ್ದು; ಮಧ್ಯಂತರ ಮಂಡಲ ಪಂಚಾಯತಿಗಳಾಗಿದ್ದು ನಂತರ ಪಟ್ಟಣ ಪಂಚಾಯಿತಿಗಳಾಗಿ ಪರಿವರ್ತನೆಗೊಂಡಿರುವುದರಿಂದ ಈ ಎಲ್ಲಾ ಪಟ್ಟಣ ಪಂಚಾಯಿತಿಗಳು ಆಡಳಿತವನ್ನು ಸುಗಮ ವಾಗಿ ನಡೆಸಿಕೊಂಡು ಹೋಗಲು ಹೊಸದಾಗಿ ಪಟ್ಟಣ ಪಂಚಾಯಿತಿಗಳ ಹೆಸರಿಗೆ ಲೆಕ್ಕವನ್ನು ತೆರೆಯಲು ಖಜಾನಾಧಿಕಾರಿಗಳಿಗೆ ಪ್ರಾಧಿಕಾರ ಪತ್ರವನ್ನು ನೀಡಬೇಕೆಂದು ಈಗಾಗಲೇ ಮಹಾಲೇಖಪಾಲರು, ಕರ್ನಾಟಕ ರವರಿಗೆ ನಿರ್ದೇಶನವನ್ನು ನೀಡಲಾಗಿದೆ.